ಹಿರೇಕೆರೂರು ತಾಲ್ಲೂಕು ದೀವಿಗಿ ಹಳ್ಳಿಯಲ್ಲಿ ಪ್ರೌಢಶಾಲೆ

2150 - ಶ್ರೀ ಯು.ಬಿ. ಬಣಕಾರ್ (ಹಿರೇಕೆರೂರು) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಹಿರೇಕೆರೂರು ತಾಲ್ಲೂಕು ದೀವಿಗೆ ಹಳ್ಳಿ ಗ್ರಾಮಸ್ಥರು ತಮ್ಮ ಗ್ರಾಮದ ಅನೇಕ ಹಿರಿಯರು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸಿ ಅನೇಕ ಹೋರಾಟಗಳಲ್ಲಿ ಭಾಗವಹಿಸಿದ ಕಾರಣ ಈ ಸ್ವಾತಂತ್ರ್ಯದ ಸುವರ್ಣ ಮಹೋತ್ಸವದ ನೆನಪಿಗಾಗಿ ಪ್ರೌಢಶಾಲೆ ಮಂಜೂರು ಮಾಡುವಂತೆ ಕೋರಿರುವುದು ಗಮನಕ್ಕೆ ಬಂದಿದೆಯೇ?*

ಆ) *ಹಾಗಿದ್ದಲ್ಲಿ ಮಂಜೂರು ಮಾಡಲು ಸರ್ಕಾರ ಕ್ರಮ ತೆಗೆದುಕೊಳ್ಳಲಾಗುವುದೆ?*

ಶ್ರೀ ಹೆಚ್.ಜಿ. ಗೋವಿಂದೇಗೌಡ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು) :

ಅ) ಈವರೆವಿಗೂ ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಅನುದಾನ ರಹಿತ ಪ್ರೌಢಶಾಲೆಗಳ ಅನುದಾನದ ಮಂಜೂರಾತಿ

2151 - ಶ್ರೀ ಯು.ಬಿ. ಬಣಕಾರ್ (ಹಿರೇಕೆರೂರು) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *1997-98ನೇ ಸಾಲಿಗೆ ಖಾಸಗಿ ಸಂಸ್ಥೆಯವರು ನಡೆಸುತ್ತಿರುವ ಅನುಧಾನ ರಹಿತ ಹಾಗೂ ಅನುದಾನ ಸಹಿತ ಪ್ರೌಢಶಾಲೆಗಳು ಎಷ್ಟು? ಅವು ಯಾವುವು?*

ಆ) *ಅನುದಾನ ರಹಿತ ಪ್ರೌಢಶಾಲೆಗಳಿಗೆ ಅನುದಾನ ನೀಡಲು ಸರ್ಕಾರ ಕ್ರಮ ತೆಗೆದುಕೊಳ್ಳುವುದೇ?*

ಶ್ರೀ ಹೆಚ್.ಸಿ. ಗೋವಿಂದೇಗೌಡ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು)

ಅ) 1997-98ನೇ ಸಾಲಿಗೆ ಖಾಸಗಿ ಸಂಸ್ಥೆಯವರು ನಡೆಸುತ್ತಿರುವ ಅನುದಾನ ರಹಿತ ಹಾಗೂ ಅನುದಾನ ಸಹಿತ ಪ್ರೌಢಶಾಲೆಗಳ ಸಂಖ್ಯೆಯನ್ನು ಈ ಕೆಳಕಂಡಂತೆ ನಮೂದಿಸಿದೆ.

ವರ್ಷ	ಅನುದಾನ ರಹಿತ	ಅನುದಾನ ಸಹಿತ	ಒಟ್ಟು
1997-98	2846	2450	5293

(ಜಿಲ್ಲಾವಾರು ಶಾಲೆಗಳ ಪಟ್ಟಿಯನ್ನು ಲಗತ್ತಿಸಿದೆ)

ಆ) ಶಾಶ್ವತ ಅನುದಾನ ರಹಿತ ಶಾಲೆಗಳಿಗೆ ಅನುದಾನ ನೀಡುವ ಪ್ರಶ್ನೆ ಉದ್ಭವಿಸುವುದಿಲ್ಲ. ಆದರೆ ದಿನಾಂಕ 1-6-87ಕ್ಕೆ ಮುಂಚೆ ಪ್ರಾರಂಭವಾದ ಅನುದಾನರಹಿತ ಶಾಲೆಗಳಿಗೆ ಜೇಷ್ಠತೆಯನುಸಾರ ಹಾಗೂ ಹಣದ ಲಭ್ಯತೆಗೆ ಒಳಪಟ್ಟು ಅನುದಾನ ನೀಡಲಾಗುವುದು.

ಅನುಬಂಧ

ಕ್ರ. ಸಂ.	ಜಿಲ್ಲೆಗಳು	ಅನುದಾನಿತ	ಅನುದಾನ ರಹಿತ	ಒಟ್ಟು
1.	ಬೆಂಗಳೂರು ಉತ್ತರ	109	201	310
2.	ಬೆಂಗಳೂರು ದಕ್ಷಿಣ	117	303	420
3.	ಬೆಂಗಳೂರು ಗ್ರಾಮಾಂತರ	80	115	195
4.	ಕೋಲಾರ	48	138	186
5.	ಶಿವಮೊಗ್ಗ	116	158	274
6.	ಚಿತ್ರದುರ್ಗ	207	220	427
7.	ತುಮಕೂರು	238	180	418
8.	ಮೈಸೂರು	123	170	293
9.	ಮಂಡ್ಯ	63	84	147
10.	ಹಾಸನ	97	155	252
11.	ಚಿಕ್ಕಮಗಳೂರು	88	80	168
12.	ಕೊಡಗು	26	32	58
13.	ದಕ್ಷಿಣ ಕನ್ನಡ	158	120	278
14.	ಬೆಳಗಾಂ	270	156	426
15.	ಬಿಜಾಪುರ	209	182	391
16.	ಧಾರವಾಡ	184	225	409
17.	ಉತ್ತರ ಕನ್ನಡ	123	79	202
18.	ಗುಲ್ಬರ್ಗಾ	40	18	58
19.	ಬಳ್ಳಾರಿ	54	68	122
20.	ರಾಯಚೂರು	35	69	104
21.	ಬೀದರ್	65	93	158
ರಾಜ್ಯದಲ್ಲಿರುವ ಒಟ್ಟು ಶಾಲೆಗಳು		**2450**	**2846**	**5296**